# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಲಗ್ಗೆರೆ ಉಪವಿಭಾಗ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, ಝೂನ್ ಪಾರ್ಕ್ ಕಾಂಪೌಂಡ್, ನಾಗರಬಾವಿ 2ನೇ ಹಂತ, ಬೆಂಗಳೂರು-560 072**

**ವಾರ್ಡ್ ಸಂಖ್ಯೆ 73 ರಲ್ಲಿ ದಿನಾಂಕ:-26.11.2020 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.**

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ ಬಸವರಾಜು, ಕಾರ್ಯಪಾಲಕ ಅಭಿಯಂತರು, ರಾರಾನಗರ,
2. ಶ್ರೀ.ಡಿ.ಭೀಮಾನಾಯ್ಕ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲಗ್ಗೆರೆ ಉಪವಿಭಾಗ.
3. ಶ್ರೀ. ನವೀನ್ ಆರ್, ಸಹಾಯಕ ಅಭಿಯಂತರರು, ವಾರ್ಡ 73.
4. ಶ್ರೀ.ಸಿ.ಪಿ.ಹನುಮಂತರಾಜು, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕೊಟ್ಟಿಗೆಪಾಳ್ಯ
5. ಶ್ರೀ. ಶಂಕರ್‌ಲಿಂಗೇಗೌಡ, ಕಿರಿಯ ಅಭಿಯಂತರರು, ಬೆಸ್ಕಾಂ
6. ಶ್ರೀ ನಂಜುಂಡಪ್ಪ,ಹಿರಿಯ ಆರೋಗ್ಯ ಪರಿವೀಕ್ಷಕರು
7. ಶ್ರೀ.ಮಂಜುನಾಥ್, ಕೆಲಸ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕೊಟ್ಟಿಗೆಪಾಳ್ಯ.
8. ಶ್ರೀ.ಕಿರಣ್ ಕುಮಾರ್, ಬಿ.ಬಿ.ಎಂ.ಪಿ ಮಾರ್ಷಲ್, ಕೊಟ್ಟಿಗೆಪಾಳ್ಯ
9. ಸಂಘ ಸಂಸ್ಥೆಗಳ ಕಾರ್ಯದರ್ಶಿಗಳು.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**ಹಿಂದಿನ ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಿರುವುದು.**

| ಕ್ರ ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 1 | ಶ್ರೀ ವಿಜಯ ಕುಮಾರ್, ಮುಖ್ಯ ಅಭಿಯಂತರರು ರವರು ನಾಗರಭಾವಿ 9ನೇ ಬ್ಲಾಕ್ 6ನೇ ಮುಖ್ಯ ರಸ್ತೆ ಗಾಂಧಿ ಪಾರ್ಕ ಹತ್ತಿರ, ಮಲೆಮಹಾದೇಶ್ವರ ಬಡಾವಣೆ ಹತ್ತಿರ, ಕಲ್ಯಾಣ ನಗರ ಸೇತುವೆ ಹತ್ತಿರ ಹಾಗೂ ಸುಮನಹಳ್ಳಿ ಮೇಲು ಸೇತುವೆ ಹತ್ತಿರ ಕಸ ವಿಲೇವಾರಿ ಮಾಡುವ ಬಗ್ಗೆ | ನಿರ್ಣಯದಂತೆ ಕ್ರಮ ಕೈಗೊಳ್ಳಲು ಅನುವು ಮಾಡಿಕೊಳ್ಳಲಾಗಿದೆ. | ಶ್ರೀ.ವಿಜಯ ರಾಘವನ್, ಹಾಗೂ ಶ್ರೀ.ನಂಜುಂಡಪ್ಪ, ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ತಿಳಿಸಿರುತ್ತಾರೆ. |
| 2 | ಸಹಾಯಕ ಅಭಿಯಂತರು,ಬಿಡ್ಬ್ಲೂ ಎಸ್ ಎಸ್, ಬಿ ಯ 9ನೇ ಬ್ಲಾಕ್ ನಾಗರಬಾವಿ 12ನೇ ಬಿ ಮೈನ್ ನಲ್ಲಿ ನೀರು ಸರಬರಾಜು ಪೈಪು ಹಾಳಾಗಿದ್ದು, | ನಿರ್ಣಯದಂತೆ ಕ್ರಮ ಕೈಗೊಳ್ಳಲು ಅನುವು ಮಾಡಿಕೊಳ್ಳಲಾಗಿದೆ. | ಶ್ರೀ ವಿಶ್ವನಾಥ ನಾಯ್ಕ್ ರವರಿಗೆ ತಿಳಿಸಿರುತ್ತಾರೆ |

| | | | |
|---|---|---|---|
| 3 | ಪದೇ ಪದೇ ವಿದ್ಯುತ್ ವ್ಯತ್ಯಯದ ಬಗ್ಗೆ ಗಂಭೀರವಾಗಿ ಪರಿಗಣಿಸಲು ತಿಳಿಸಿರುತ್ತಾರೆ. | ನಿರ್ಣಯದಂತೆ ಕ್ರಮ ಕೈಗೊಳ್ಳಲು ಅನುವು ಮಾಡಿಕೊಳ್ಳಲಾಗಿದೆ. | ಚನ್ನಪ್ಪ, ಸಹಾಯಕ ಅಭಿಯಂತರರು, ಬೆಸ್ಕಾಂ ತಿಳಿಸಿರುತ್ತಾರೆ |
| 4 | 11ನೇ ಬ್ಲಾಕ್‌ನಲ್ಲಿ ವಿದ್ಯುತ್ ವ್ಯತ್ಯಯದ ಬಗ್ಗೆ ಗಂಭೀರವಾಗಿ ಪರಿಗಣಿಸಲು ತಿಳಿಸಿರುತ್ತಾರೆ. | | ಶಂಕರ್‌ಲಿಂಗಯ್ಯ, ಕಿರಿಯ ಅಭಿಯಂತರರು ರವರಿಗೆ ತಿಳಿಸಿರುತ್ತಾರೆ. |

**ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ.**

ಘನತ್ಯಾಜ್ಯ ನಿರ್ವಹಣೆ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸಲಾಯಿತು.

1. ಕಸ ವಿಲೇವಾರಿ ಮಾಡಲು ಕಸ Black Spot ಗಳನ್ನು ಸ್ಥಳೀಯ ಮುಖಂಡರುಗಳಿಗೆ ಗುರುತಿಸಿಕೊಡಲು ಕಾರ್ಯಪಾಲಕ ಅಭಿಯಂತರರು, ರಾರಾನವಿಭಾಗ ರವರು ತಿಳಿಸಿರುತ್ತಾರೆ.
2. ಕಸ ಶೇಖರಣೆಗಾಗಿ ಕಲ್ಯಾಣನಗರ ಮುಖ್ಯರಸ್ತೆ ಬ್ರಿಡ್ಜ್ ಹತ್ತಿರ ಬೇರೆ ವಾರ್ಡ್‌ನ ಕಸ ವಿಲೇವಾರಿ ವಾಹನಗಳು ಬರುತ್ತಿರುವುದರಿಂದ, ಸದರಿ ಸ್ಥಳವನ್ನು ಬದಲಿಸಲು ಶ್ರೀ.ಅಮರ್‌ನಾಥ್ ರವರು ಕೋರಿರುತ್ತಾರೆ.
3. ಕಸ ವಿಲೇವಾರಿ ಹಾಗೂ ರಸ್ತೆ ಗುಡಿಸಲು ದಿನನಿತ್ಯ ಹಾಜರಾಗುತ್ತಿಲ್ಲವೆಂದು ಶ್ರೀ.ಅಮರ್‌ನಾಥ್ ಹಾಗೂ ಶ್ರೀ.ಗೋಪಾಲ ಕೃಷ್ಣ ರವರು ತಿಳಿಸಿರುತ್ತರೆ.
4. ಕಸ ಶೇಖರಣೆ ಸಮಯದಲ್ಲಿ ಹ್ಯಾಂಡ್ ಗ್ಲೋಸ್ ಮತ್ತು ಮಾಸ್ಕ್‌ನ್ನು ಧರಿಸುತ್ತಿಲ್ಲವೆಂದು ಶ್ರೀ.ಗೋಪಾಲ ಕೃಷ್ಣ ರವರು ತಿಳಿಸಿರುತ್ತರೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನ ತ್ಯಾಜ್ ವಿಲೇವಾರಿ ರವರು ಮುಂದಿನ ಸಭೆಗೆ ಹಾಜರಾಗಲು ಕಾರ್ಯಪಾಲಕ ಅಭಿಯಂತರವರು ತಿಳಿಸಿರುತ್ತಾರೆ.

**ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ ಚರ್ಚಿಸುವ ವಿಚಾರ.**

1. ವಾರ್ಡ್‌ವ್ಯಾಪ್ತಿಯಲ್ಲಿ ಸುಮಾರು ಪಾಟ್‌ಹೋಲ್‌ಗಳಿದ್ದು, ಅವುಗಳನ್ನು ಮುಚ್ಚಲು ಕ್ರಮ ಕೈಗೊಳ್ಳಲು ಕ್ರಮಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.
2. ವಾರ್ಡ್‌ಗೆ ಸಂಬಂಧಿಸಿದಂತೆ ಸುಂಕದಕಟ್ಟೆ, 9ನೇ ಬ್ಲಾಕ್, ನಮ್ಮೂರ ತಿಂಡಿ ಹತ್ತಿರ ಚೌಡೇಶ್ವರಿನಗರ ಹಾಗೂ ಹಲವಾರು ಸ್ಥಳಗಳಲ್ಲಿ ಫ್ಲೆಕ್ಸ್ ಬ್ಯಾನರ್‌ಗಳಿದ್ದು, ಅವುಗಳನ್ನು ತೆರವುಗೊಳಿಸುವಂತೆ ಕ್ರಮಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

**ವಾರ್ಡ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಾಮಗಾರಿಗಳಾದ ಕುಡಿಯುವ ನೀರು ಮತ್ತು ಒಳಚರಂಡಿಯ ಬಗ್ಗೆ ಚರ್ಚಿಸುವ ವಿಚಾರ.**

1. ಸದರಿ ವಾರ್ಡ್‌ನ ವ್ಯಾಪ್ತಿಗೆ ಒಳಪಟ್ಟಂತೆ ಅರ್‌ವಿನ್ ಶಾಲೆ, ಹಾಗೂ ಇನ್ನಿತರೆ ರಸ್ತೆಗಳಲ್ಲಿ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ.ರವರು ಕೊಳವೆ ಪೈಪ್‌ಗಳ ಅಳವಡಿಕೆಗೆ ಗುಂಡಿಗಳನ್ನು ತೆಗಿದಿದ್ದು, ಅವುಗಳನ್ನು ಮುಚ್ಚಲು ಕೈಗೊಂಡ ಕ್ರಮಗಳ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿಗೆ ವರದಿಯನ್ನು ಸಲ್ಲಿಸುವಂತೆ ಸೂಚಿಸಿದೆ.
2. ಸದರಿ ವಾರ್ಡ್‌ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯ ಒಳಚರಂಡಿಗೆ ಸಂಬಂಧಪಟ್ಟಂತೆ ಕೊಳವೆಬಾವಿಗಳ ಸಂಖ್ಯೆ ಹಾಗೂ ಅದನ್ನು ಹಸ್ತಾಂತಿರಿಸಿರುವ ವರದಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿಗೆ ವರದಿಯನ್ನು ಸಲ್ಲಿಸುವಂತೆ ಸೂಚಿಸಿದೆ.
3. ಮ್ಯಾನ್‌ಹೋಲ್ ಕಾಮಗಾರಿ ಮುಗಿದ ನಂತರ ರಸ್ತೆಯನ್ನು ಯಥಾ ಸ್ಥಿತಿಯಲ್ಲಿಡುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ.ರವರಿಗೆ ಕಾರ್ಯಪಾಲಕ ಅಭಿಯಂತರರು ಸೂಚಿಸಿರುತ್ತಾರೆ.
4. ಸದರಿ ವ್ಯಾರ್ಡ್‌ನ ಶ್ರೀನಿವಾಸನಗರ ವಾಸಿಯಾದ ಶ್ರೀ.ಚಂದ್ರಶೇಖರ್ ರವರ ಮನೆಯ ಮುಂದಿನ ಛೇಂಬರ್‌ನ್ನು ಸ್ಥಳಾಂತರಿಸುವಂತೆ ಕಾರ್ಯಪಾಲಕ ಅಭಿಯಂತರವರು ಸೂಚಿಸಿರುತ್ತಾರೆ.
5. ಸದರಿ ವ್ಯಾಪ್ತಿಗೆ ಸಂಬಂಧಪಟ್ಟಂತೆ 9ನೇ ಬ್ಲಾಕ್‌ನಲ್ಲಿ ಮ್ಯಾನ್‌ಹೋಲ್‌ಗಳು ರಸ್ತೆಗಿಂತ ಎತ್ತರವಾಗಿದ್ದು, ಅದನ್ನು ಸರಿಪಡಿಸುವಂತೆ ಶ್ರೀ.ಅಮರ್‌ನಾಥ್ ರವರು ತಿಳಿಸಿರುತ್ತಾರೆ.

**ವಾರ್ಡ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಬೆಸ್ಕಾಂ ಚರ್ಚಿಸುವ ವಿಚಾರ.**

1. ಬೀದಿ ದೀಪಗಳ, ಗುತ್ತಿಗೆದಾರರು Cut Point ಗಳನ್ನು ಹೆಚ್ಚಿಸುತ್ತಿದ್ದು, ಅದಕ್ಕೆ ಆಡಿಟಿಂಗ್ ಸಮಸ್ಯೆ ಎದುರಾಗುತ್ತದೆ ಎಂದು ಶ್ರೀ.ಶಂಕರಲಿಂಗಯ್ಯ, ಕಿರಿಯ ಅಭಿಯಂತರರು, ಬೆಸ್ಕಾಂ ರವರು ತಿಳಿಸಿರುತ್ತಾರೆ.
2. ಮರಗಳನ್ನು ಹಾಗೂ ಕೊಂಬೆಗಳನ್ನು ಆಗ್ಗಿಂದಾಗ್ಗೆ ತೆರವುಗೊಳಿಸಲು ಕಾರ್ಯಪಾಲಕ ಅಭಿಯಂತರರು ತಿಳಿಸಿರುತ್ತಾರೆ.
3. ಬೀದಿ ದೀಪಗಳ Junctio Box ಗಳನ್ನು ಸದಾ ತೆಗೆದಿರದಂತೆ ಮುಚ್ಚಲು ಕಾರ್ಯಪಾಲಕ ಅಭಿಯಂತರರು ತಿಳಿಸಿರುತ್ತಾರೆ.

**ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್–19 ರ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುವ ವಿಚಾರ.**

1. ಕೋವಿಡ್ –19 ಗೆ ಸಂಬಂಧಪಟ್ಟಂತಹ ದಾಖಲೆಗಳು, ಮಾಹಿತಿಗಳು, ಮಾಸ್ಕ್ ಹಾಕದೇ ಇರುವವರಿಗೆ ವಿಧಿಸಿದ ದಂಡದ ವಿವರಗಳನ್ನು ಮುಂದಿನ ಸಭೆಯಲ್ಲಿ ಹಾಜರುಪಡಿಸುವಂತೆ ಶ್ರೀ.ನಂಜುಂಡಪ್ಪ, ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಕಾರ್ಯಪಾಲಕ ಅಭಿಯಂತರವರು ತಿಳಿಸಿರುತ್ತಾರೆ.
2. ಕೋವಿಡ್ –19 ಗೆ ಸಂಬಂಧಪಟ್ಟಂತೆ Spray and fogging ಮಾಡಲು ಶ್ರೀ.ನಂಜುಂಡಪ್ಪ, ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಕಾರ್ಯಪಾಲಕ ಅಭಿಯಂತರವರು ತಿಳಿಸಿರುತ್ತಾರೆ.

**ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.**

ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾಧನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 73 ಕೊಟ್ಟಿಗೆಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಸಮಿತಿ ಅಧ್ಯಕ್ಷರು,
ಮುಖ್ಯ ಅಭಿಯಂತರು(ರಾ.ರಾ.ನ)
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ